ಶ್ರೀ ಕೆ. ಶ್ರೀನಿವಾಸ ಗೌಡ:- ಮಾನ್ಯ ಅಧ್ಯಕ್ಷರೆ, ವ್ಯವಸಾಯ ಇಲಾಖೆಯಲ್ಲಿ ಎರಡೂ ಯೂನಿವರ್ಸಿಟಿಗಳು ನಮ್ಮಲ್ಲಿಯೇ ಇರುವುದರಿಂದ ಅದಕ್ಕೆ ತಳಿಗಳನ್ನು ಸರಿಯಾಗಿ ನೋಡಿ ನಾವು ಸೆಲೆಕ್ಟ್ ಮಾಡಬೇಕಾಗುತ್ತದೆ. ಸೀಡ್ಲಿಂಗ್ ಅನ್ನು ಸರಿಯಾಗಿ ಮಾಡಿ ಕೊಡದೇ ಇದ್ದರೆ ನಾಳೆ 4 ವರ್ಷಕ್ಕೋ 5 ವರ್ಷಕ್ಕೋ ಅದು ಫಲ ಬಿಡುವಾಗ ಸರಿಯಾಗಿ ಅದು ಕಾಯಿ ಬಿಡದಿದ್ದರೆ ರೈತರು ನಷ್ಟಕ್ಕೆ ಒಳಪಡುತ್ತಾರೆ. ಆದ್ದರಿಂದ ಅದನ್ನು ನಮ್ಮ ಮೂಲಕ ಮಾಡಬೇಕಾದರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲೂ ಬೆಳೆಸುವುದಕ್ಕೆ ವಿರೋಧ ಇಲ್ಲ. ಫಾರೆಸ್ಟ್‌ನಲ್ಲೂ ಬೆಳೆಸಬೇಕು ಇದನ್ನು ಏಕೆಂದರೆ ನಮಗೆ ಕೋಟ್ಯಾಂತರ ರೂಪಾಯಿಗಳ ಪೆಟ್ರೋಲ್ ಡೀಸೆಲ್ ನಮ್ಮ ದೇಶಕ್ಕೆ ಬರುವುದನ್ನು ತಡೆಗಟ್ಟುವುದಕ್ಕೆ ಇದನ್ನು ಬೆಳೆಸುವಂತಹ ಅವಕಾಶ ಇರುವುದರಿಂದ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಕೆಲಸ ಮುಂದಿನ ದಿನಗಳಲ್ಲಿ ಮಾಡಬಹುದು.

ವಿಷಯ:- ತೆಂಗು ಮರಗಳಿಗೆ ತಗುಲಿದ ರೋಗವನ್ನು ತಡೆಗಟ್ಟುವ ಬಗ್ಗೆ.

184(2836) ಶ್ರೀ ಪದ್ಮನಾಭ ಕೊಟ್ಟಾರಿ ಕೆ.(ವಿಟ್ಲ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆಂಗಿನ ಗಿಡ ಅಭಿವೃದ್ಧಿಗಾಗಿ ಬೆಳೆಗಾರರಿಗೆ ಸಹಕಾರಿಯಾಗಿರುವ ಯೋಜನೆಗಳು ಯಾವುವು;

ಆ) ತೆಂಗು ಕೃಷಿಗೆ ಹನಿ ನೀರಾವರಿ ಮಾಡುವಾಗ ಸಬ್ಸಿಡಿಯನ್ನೇನಾದರೂ ಸರ್ಕಾರ ನೀಡುತ್ತಿದೆಯೇ;

ಇ) ಹಾಗಿದ್ದಲ್ಲಿ, ಒಂದು ತೆಂಗಿನ ಮರಕ್ಕೆ ಎಷ್ಟು ಸಬ್ಸಿಡಿ ಕೊಡಲಾಗುವುದು;

ಈ) ರಾಜ್ಯದ ತೆಂಗು ಬೆಳೆಗಾರಿಕೆ ಹೆಚ್ಚು ಇರುವ ಪ್ರದೇಶಗಳಲ್ಲಿ ಹಬ್ಬಿರುವ ನುಸಿ ರೋಗ ಮತ್ತಿತರ ಮಾರಕ ರೋಗಗಳ ಹತೋಟಿಗಾಗಿ ಸರಕಾರ ಕೈಗೊಂಡ ಕ್ರಮಗಳೇನು;

ಉ) ತೆಂಗಿನ ಮರಗಳಿಗೆ ತಗುಲಿದ ರೋಗಗಳು ಇನ್ನೂ ಹತೋಟಿಗೆ ಬಾರದಿದ್ದನ್ನು ಸರಕಾರ ಗಮನಿಸಿದೆಯೇ;

ಊ) ಹಾಗಿದ್ದಲ್ಲಿ, ಆ ಕುರಿತಾದ ಸರ್ಕಾರದ ಕ್ರಮಗಳೇನು?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು):

ಅ) ರಾಜ್ಯದಲ್ಲಿ ತೆಂಗಿನ ಗಿಡ ಅಭಿವೃದ್ಧಿಗಾಗಿ:

1. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆಯಡಿ ಉತ್ತಮ ಗುಣಮಟ್ಟದ ಸಸಿಗಳನ್ನು ಇಲಾಖೆಯ ತೋಟಗಾರಿಕೆ ಕ್ಷೇತ್ರಗಳಲ್ಲಿ ಬೆಳೆಸಿ ರೈತರಿಗೆ ನಿಗದಿತ ದರದಲ್ಲಿ ವಿತರಿಸಲಾಗುತ್ತಿದೆ.
2. ತೆಂಗು ಪ್ರದೇಶ ವಿಸ್ತರಣೆ ಯೋಜನೆಯಡಿಯಲ್ಲಿ ತೆಂಗು ಬೆಳೆಯ ವಿಸ್ತರಣೆಗೆ ಸಹಾಯಧನವನ್ನು ನೀಡಲಾಗುತ್ತಿದೆ.
3. ಸಮಗ್ರ ತೆಂಗು ಬೇಸಾಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಆಯ್ದ ಫಲಾನುಭವಿಗಳ ತೋಟಗಳಲ್ಲಿ ತೆಂಗಿನ ಗಿಡಗಳಿಗೆ ಬೇಕಾಗುವ ಸಂಪೂರ್ಣ ಪೋಷಕಾಂಶಗಳನ್ನು ನೀಡಿ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲಾಗುತ್ತಿದೆ.

4. ಇದೇ ಸಮಗ್ರ ತೆಂಗು ಬೇಸಾಯ ಅಭಿವೃದ್ಧಿ ಯೋಜನೆಯಡಿಯಲ್ಲಿ ತೆಂಗಿನ ತೋಟಗಳಲ್ಲಿ ದೊರಕುವ ತ್ಯಾಜ್ಯವಸ್ತುಗಳನ್ನು ಉಪಯೋಗಿಸಿ ತೋಟದಲ್ಲಿಯೇ ಸಾವಯವ ಗೊಬ್ಬರವನ್ನಾಗಿ ಮಾರ್ಪಡಿಸಲು ಸಹಾಯಧನವನ್ನು ನೀಡಲಾಗುತ್ತಿದೆ.

ಆ) ಹೌದು.

ಇ) ಹನಿ ನೀರಾವರಿ ಸಹಾಯಧನವನ್ನು ವಿಸ್ತೀರ್ಣ ಆಧರಿಸಿ ಸಬ್ಸಿಡಿ ನೀಡಲಾಗುವುದು. ರಾಜ್ಯ ಸರ್ಕಾರದ ಯೋಜನೆಯಡಿ ತೆಂಗಿನ ಬೆಳೆಗೆ ಒಂದು ಎಕರೆಗೆ ಶೇ. 100 ರಂತೆ ರೂ. 9200/–, ಶೇ. 50 ರಂತೆ ರೂ. 4600/– ಮತ್ತು ಕೇಂದ್ರ ಪುರಸ್ಕೃತ ಯೋಜನೆಯಡಿ ಶೇ.25 ರಂತೆ ರೂ. 2450 ಸಬ್ಸಿಡಿ ನೀಡಲಾಗುವುದು.

ಈ) ತೆಂಗಿನ ನುಸಿ ಪೀಡೆ ಹತೋಟಿ ಬಗ್ಗೆ ಕರಪತ್ರಗಳ ಮೂಲಕ, ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. ಅಲ್ಲದೆ, ನುಸಿಯ ಹತೋಟಿಗಾಗಿ ಸಮಗ್ರ ಪರಿಸರ ಪೂರಕ ನಿರ್ವಹಣಾ ಕ್ರಮ ಹಾಗೂ ಪರಿಸರ ಪೂರಕ ಪೀಡೆ ನಾಶಕಗಳನ್ನು ಬಳಸಲು ರೈತರಿಗೆ ಸಲಹೆ ನೀಡಲಾಗುತ್ತಿದೆ. ಇದರ ಬಗ್ಗೆ ರೈತರಿಗೆ ಅರಿವು ಮೂಡಿಸಲು 100 ಬ್ಲಾಕ್ ಪ್ರಾತ್ಯಕ್ಷತೆಗಳನ್ನು ಪ್ರಮುಖ ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ಪ್ರಾತ್ಯಕ್ಷತೆ ಕಾರ್ಯಕ್ರಮಕ್ಕೆ ಬೇಕಾದ ಪೋಷಕಾಂಶಗಳು ಹಾಗೂ ಜೈವಿಕ ಕೀಟನಾಶಕಗಳನ್ನು ಉಚಿತವಾಗಿ ವಿತರಿಸಲಾಗಿದೆ. ರಿಯಾಯಿತಿ ದರದಲ್ಲಿ ಜೈವಿಕ ಕೀಟನಾಶಕಗಳನ್ನು ನುಸಿ ಹಾಗೂ ಕಪ್ಪು ತಲೆ ಹುಳುವಿನ ಹತೋಟಿಗಾಗಿ ಒದಗಿಸಲಾಗುತ್ತಿದೆ. ಕಪ್ಪು ತಲೆ ಹುಳುವಿನ ಹತೋಟಿಗಾಗಿ ಪರೋಪಜೀವಿಗಳನ್ನು ಉತ್ಪಾದಿಸಿ ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

ಉ) ಗಮನಿಸಿದೆ.

ಊ) ನುಸಿಯು ಅತಿ ಸೂಕ್ಷ್ಮ ಜೀವಿಯಾಗಿದ್ದು ಅದರ ಜೀವನ ಚಕ್ರವು ಕೇವಲ 7–10 ದಿನಗಳಾಗಿದ್ದು ಶೀಘ್ರವಾಗಿ ಗಾಳಿಯ ಮೂಲಕ ಹರಡುತ್ತದೆ. ನುಸಿ ಬಾಧಿತ ಎಲ್ಲಾ ಮರಗಳಿಗೆ ಏಕಕಾಲದಲ್ಲಿ ಉಪಚಾರ ಕೈಗೊಂಡರೆ ಮಾತ್ರ ಇದರ ಹತೋಟಿ ಸಾಧ್ಯ. ಆದ್ದರಿಂದ ಈ ಬಗ್ಗೆ ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ. ಅಲ್ಲದೆ, ರಾಷ್ಟ್ರೀಯ ಸ್ಟೀರಿಂಗ್ ಸಮಿತಿಯು ಶಿಫಾರಸ್ಸು ಮಾಡಿರುವ ಪೋಷಕಾಂಶ ಹಾಗೂ ಜೈವಿಕ ಕೀಟನಾಶಕಗಳನ್ನು ಉಪಯೋಗಿಸುವುದರಿಂದ ರೋಗ ನಿರೋಧಕ ಶಕ್ತಿಯು ಹೆಚ್ಚಾಗುವುದೆಂದು ತಜ್ಞರ ಅಭಿಪ್ರಾಯವಾಗಿದ್ದು ರೈತರಿಗೆ ಇವುಗಳ ಬಳಕೆ ಬಗ್ಗೆ ಸಲಹೆ ನೀಡಲಾಗುತ್ತಿದೆ.

ಶ್ರೀ ಪದ್ಮನಾಭ ಕೊಟ್ಟಾರಿ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ನಾನು ತೆಂಗಿನ ಬೀಜ ಸಂಗ್ರಹಣೆ ಮತ್ತು ನರ್ಸರಿ ವಿಸ್ತರಣೆ ಯೋಜನೆಯಡಿಯಲ್ಲಿ ಉತ್ತಮ ಗುಣ ಮಟ್ಟದ ಸಸಿಗಳನ್ನು ತೋಟಗಾರಿಕಾ ಕ್ಷೇತ್ರದಲ್ಲಿ ಬೆಳೆಸಿ ರೈತರಿಗೆ ನಿಗದಿತ ದರದಲ್ಲಿ ವಿತರಿಸಲಾಗುತ್ತಿದೆ ಎಂದು ಹೇಳಿ ಉತ್ತರವನ್ನು ನೀಡಿದ್ದಾರೆ. ಎರಡನೆಯದು ನಾನು ಕೇಳಿರುವಂತಾದ್ದು ತೆಂಗು ಕೃಷಿಗೆ ಹನಿ ನೀರಾವರಿ ಮಾಡುತ್ತಿರುವಂತಹ ಸಂದರ್ಭದಲ್ಲಿ ಹನಿ ನೀರಾವರಿಗೆ ಸರಕಾರ ರೈತರಿಗೆ ಯಾವ ರೀತಿ ಎಷ್ಟು ಸಬ್ಸಿಡಿಯನ್ನು ನೀಡುತ್ತದೆ ಎನುವಂತಹ ಪ್ರಶ್ನೆಯನ್ನು ಕೇಳಿದ್ದೆ. ಆಮೇಲೆ ತೆಂಗು ಕೃಷಿಗೆ ಇವತ್ತು ಮಾರಕವಾಗಿರುವಂತಹ ರೋಗಗಳು ನುಸಿರೋಗ ಮತ್ತು ಇತರ ಮಾರಕ ರೋಗಗಳ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಅಂತ ಹೇಳಿ ನಾನು ಕೇಳಿದ್ದೆ, ಅದಕ್ಕೆ ಸಮರ್ಪಕವಾದಂತಹ ಉತ್ತರ ನೀಡಲಿಲ್ಲ.

ಶ್ರೀ ಆರ್. ಶ್ರೀನಿವಾಸ್:– (ತೋಟಗಾರಿಕಾ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ರಾಜ್ಯದಲ್ಲಿ ತೆಂಗಿನ ಬೀಜಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ, ಈಗ ನಾವು ಸರ್ಕಾರದಿಂದ ಉತ್ತಮವಾದಂತಹ ಸಸಿಗಳನ್ನು ಕೊಡತಕ್ಕಂಥ ಒಂದು ಯೋಜನೆಯನ್ನು ಮಾಡಿದ್ದೇವೆ. ಈ ಒಂದು ರೋಗ 2002ನೇ ಇಸವಿಯಲ್ಲಿ ಸುಮಾರು 10 ಕೋಟಿ ರೂಪಾಯಿಗಳ ಔಷಧಿಗಳನ್ನು ರೈತರಿಗೆ ಸಹಾಯದನವಾಗಿ ಕೊಟ್ಟಿರತಕ್ಕಂಥಾದ್ದು ಇದೆ. ಈಗ ಈ ನುಸಿರೋಗ ಸ್ವಲ್ಪ ಹತೋಟಿಗೆ ಬಂದಿದೆ ಬಹುಶಃ ಈ ಸಾಲಿನಲ್ಲಿ ಶೇಕಡ 50 ಪರ್ಸೆಂಟ್‌ನಷ್ಟು ಹತೋಟಿಗೆ ಬಂದಿದೆ. ಮೂರು ವರ್ಷಗಳಿಂದ ಹೆಚ್ಚಿನ ಹಣವನ್ನು ನಾವು ಅದಕ್ಕೆ ಖರ್ಚು ಮಾಡುತ್ತಿಲ್ಲ. ಸುಮಾರು ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ. ಆದ್ದರಿಂದ ಸ್ವಲ್ಪ ಹತೋಟಿಗೆ ಬರುತ್ತಿದೆ. ಇನ್ನು ಮುಂದೆ ಕೂಡ ನಿಜವಾಗಿಯೂ ಹೇಳಬೇಕಾದರೆ ಇದು ಔಷಧಿಗಳ ಮುಖಾಂತರ ಹತೋಟಿಗೆ ಬರುತ್ತದೆ ಎನ್ನುವುದಕ್ಕಿಂತ ಪ್ರಕೃತಿ, ಏನು ಮಳೆ ಸಕಾಲಕ್ಕೆ ಬಂದು ನೀರಿನ ಅಂಶ ಜಾಸ್ತಿಯಾದಾಗ ಅಲ್ಲಿರತಕ್ಕಂಥ ಗೊಬ್ಬರ ಆಗಬಹುದು ಅಥವಾ ಇನ್ಯಾವುದನ್ನಾದರೂ ಕೊಟ್ಟಾಗ ಈ ರೋಗ ಕ್ರಮೇಣ ಸ್ವಲ್ಪ ತಡೆಯಾಗುತ್ತದೆ.

ಶ್ರೀ ಪದ್ಮನಾಭ ಕೊಟ್ಟಾರಿ:– ಮಾನ್ಯ ಅಧ್ಯಕ್ಷರೆ, ತೆರಿಗೆ ನುಸಿರೋಗ ಮತ್ತು ಇನ್ನೊಂದು ರೀತಿಯ ಬೆಂಕಿ ರೋಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಇದೆ. ಕಳೆದ ಮೂರು ವರ್ಷಗಳಿಂದ ಇನ್ನೂ ಹತೋಟಿಗೆ ಬಾರಧ ರೀತಿಯಲ್ಲಿದೆ. ಅಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಯಾವ ರೀತಿ ವರದಿಯನ್ನು ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಎಲ್ಲಾ ಕಡೆ 3 ವರ್ಷಗಳಿಂದ ನುಸಿರೋಗ ಇನ್ನೂ ಕಡಿಮೆಯಾಗಿಲ್ಲ. ಅದಕ್ಕೆ ಯಾವುದೇ ರೀತಿಯ ಸಬ್ಸಿಡಿಯನ್ನು ಇವತ್ತಿನವರೆಗೂ ಔಷಧಿಯಾಗಲಿ ಗೊಬ್ಬರವಾಗಲಿ ಸಿಕ್ಕಿರುವಂತಾದ್ದು ನನಗೆ ತಿಳಿದಿಲ್ಲ. ಆ ರೀತಿ ಏನಾದರೂ ಇದ್ದರೆ ಮಾನ್ಯ ಸಚಿವರು ತಿಳಿಸಬೇಕು ಎಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಆರ್. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಸಬ್ಸಿಡಿ ರೂಪದಲ್ಲಿ ಔಷಧಿಯನ್ನು ಒದಗಿಸುತ್ತಿಲ್ಲ. ಸುಮಾರು 3 ವರ್ಷಗಳಿಂದ ಅದನ್ನು ಖರೀದಿ ಮಾಡುತ್ತಿಲ್ಲ; ಮೂರು ವರ್ಷಗಳಿಂದೀಚೆಗೆ ಒಂದೊಂದು ಜಿಲ್ಲೆಗೆ ನೂರು ಎಕರೆ ಪ್ಲಾಟ್‌ನ್ನು ತೆಗೆದುಕೊಂಡು ಅದಕ್ಕೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿ ಆ ಒಂದು ಪ್ರಯೋಗದ ಮುಖಾಂತರ ಹತೋಟಿಗೆ ಬಂದಾಗ ಆ ರೀತಿಯ ಒಂದು ಕ್ರಮ ತೆಗೆದುಕೊಂಡಿದ್ದೇವೆಯೇ ಹೊರತು ರೈತರಿಗೆ ಯಾವ ರೀತಿಯಾದ ಸಬ್ಸಿಡಿಯನ್ನು ಕೊಟ್ಟಿಲ್ಲ. ತಾವು ಏನು ಹಸಿ ನೀರಾವರಿ ಬಗ್ಗೆ ಕೇಳಿದ್ದೀರಿ ಈಗಾಗಲೇ ಹಸಿ ನೀರಾವರಿ ಬಗ್ಗೆ ಶೇಕಡ 50 ಪರ್ಸೆಂಟ್‌ನ್ನು ನಾವು ಸಬ್ಸಿಡಿ ರೇಟ್‌ನಲ್ಲಿ ಕೊಡುತ್ತಿದ್ದೇವೆ. ಇದು ಒಂದು ಗಿಡಕ್ಕೆ ಅಲ್ಲ ಒಂದು ಎಕರೆಗೆ ಶೇಕಡ 50 ಪರ್ಸೆಂಟ್ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಅಧ್ಯಕ್ಷರು:– ಪ್ರಶ್ನೋತ್ತರ ಒಂದು ಗಂಟೆಯೊಳಗೆ ಮುಗಿಯಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮುಗಿಯುತ್ತದೆ ಅಧ್ಯಕ್ಷರೆ,

ಅಧ್ಯಕ್ಷರು:– ಎಲ್ಲಿ ಮುಗಿಯುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ನುಸಿ ಪೀಡೆಗೆ ಹಿಂದಿನ ಸರ್ಕಾರದಲ್ಲಿ 40 ಕೋಟಿ ರೂ. ಕೊಟ್ಟಿದ್ದೇವೆ 80 ಕೋಟಿ ರೂ. ಕೊಟ್ಟಿದ್ದೇವೆಂದು ಭಾಷಣ ಮಾಡಿದ್ದಾರೆ. ಆ ದುಡ್ಡು ಏನಾದರೂ ಖರ್ಚಾಗಿದೆಯೋ ಇಲ್ಲವೋ ಎನ್ನುವುದನ್ನು ಹೇಳಬೇಕು. ಕೋಕನೆಟ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಒಂದೊಂದು ತಾಲ್ಲೂಕಿಗೆ 6 ಸಾವಿರ ಗಿಡ ತೆಗೆದುಕೊಳ್ಳುತ್ತಾರೆಂದು ಹೇಳಿದರು.

ನಾನು ಕೊಚ್ಚಿನ್‌ಗೆ ಹೋಗಿ ಆಗುವುದಿಲ್ಲ 12 ಸಾವಿರ 20 ಸಾವಿರ ಗಿಡ ತೆಗೆದುಕೊಳ್ಳಬೇಕು ನೀವು ಟ್ರೀಟ್‌ಮೆಂಟ್ ಮಾಡಬೇಕೆಂದು ಒತ್ತಾಯ ಮಾಡಿದ್ದೇನೆ. ಮತ್ತು ಶಿವಕುಮಾರ್ ಅಂತ ಹೇಳಿ ಅರಸೀಕೆರೆಯಲ್ಲಿದ್ದರು ಈಗ ಮೈಸೂರಿನಲ್ಲಿದ್ದಾರೆ, ನಿಮ್ಮ ಹಾರ್ಟಿಕಲ್ಚರ್ ಆಫೀಸರ್ ಏನೋ ಒಂದು ಔಷಧಿಯನ್ನು ಅವರು ಕಂಡುಹಿಡಿದಿದ್ದಾರೆ ಎಂದು ಅರಸೀಕೆರೆ ಭಾಗದಲ್ಲಿ ಭಾರಿ ಪ್ರಚಾರ ಆಗಿದೆ, ಅದನ್ನು ಏನಾದರೂ ಎಗ್ಜಾಮಿನ್ ಮಾಡಿ ರೈತರಿಗೆ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೀರಾ ಅಂತ ನಾನು ಹಿಂದಿನ ಸಭೆಯಲ್ಲಿ ಕೇಳಿದ್ದೆ. ತಾವೇನೂ ಮಾಡಲಿಲ್ಲ. ಈಗಲಾದರೂ ತಾವು ಒಂದು ಉತ್ತರ ಹೇಳಬೇಕು ತೆಂಗಿನ ಗಿಡ ನಾಶವಾಗಿದೆ.

ಶ್ರೀ ಆರ್. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯಲ್ಲಿ ಅದು ಇಲ್ಲ. ಇನ್ನೂ ನಿರ್ದಿಷ್ಟವಾದಂತಹ ಔಷಧಿ ಇದುವರೆಗೂ ಕೂಡ ಯಾವುದೂ ಕಂಡುಹಿಡಿದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:– ಈಗ ಏನಾಗಿದೆ ಮಾಧುಸ್ವಾಮಿಯವರು ಕೇಳಿದರು. ಏನು ಉತ್ತರ. ಇನ್ನೂ ಹೊಸಬರು ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ ತೋಟಗಾರಿಕಾ ಕ್ಷೇತ್ರಗಳಲ್ಲಿ ಬೆಳೆಸಿ ರೈತರಿಗೆ ವಿತರಿಸಲಾಗುವುದು ಎಂದು ಹೇಳಿದ್ದೀರಿ. ಬಹುಶಃ ಆದಿಚುಂಚನಗಿರಿ ಜಗದ್ಗುರು ವನ ಸಂವರ್ಧನ ಟ್ರಸ್ಟ್ ಎಂದು ಮಾಡಿ ಸುಮಾರು ಲಕ್ಷಾಂತರ ಸಸಿಗಳನ್ನು ಬೆಳೆಸಿ ಇಟ್ಟಿದ್ದಾರೆ. ಅವರು ಪುಕ್ಕಟೆಯಾಗಿ ಹಂಚುತ್ತಿದ್ದಾರೆ. ನಮ್ಮಲ್ಲಿ ಕೂಡ ಅವರನ್ನು ಕರೆದುಕೊಂಡು ಹೋಗಿ ಸುಮಾರು 50 ಸಾವಿರ ಸಸಿಗಳನ್ನು ತೆಗೆದುಕೊಂಡು ಹೋಗಿದ್ದೇವೆ. ಆ ಸಸಿಗಳನ್ನು ತೆಗೆದುಕೊಂಡು ಹೋಗುವವರೂ ಇಲ್ಲ. ಆದ್ದರಿಂದ ದಯವಿಟ್ಟು ಅವರದ್ದನ್ನೂ ಕೂಡ ಉಪಯೋಗ ಮಾಡಿಕೊಂಡು ರೈತರಿಗೆ ಪುಕ್ಕಟೆಯಾಗಿ ಸಸಿ ಕೊಡಲಿಕ್ಕೆ ತಯಾರು ಇದ್ದಾರೆ ನಿಮ್ಮ ಇಲಾಖೆಯವರು ಅವರನ್ನು ಸಂಪರ್ಕ ಮಾಡಿ ದಯವಿಟ್ಟು ಆ ಸಸಿಗಳನ್ನು ವಿತರಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆರ್. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಈ ರೋಗ ಬರುವುದಕ್ಕಿಂತ ಮುಂಚೆ ಬಹಳವಾದ ಬೇಡಿಕೆ ಇತ್ತು. ಈಗ ರೈತರಿಂದ ಬೇಡಿಕೆ ಇಲ್ಲ. ಈಗ ನಮ್ಮ ಎಲ್ಲಾ ಫಾರಂಗಳಲ್ಲಿ ಸಸಿಗಳು ಉಳಿಕೆಯಾಗಿವೆ. ಇನ್ನು ಮುಂದೆ ರೋಗ ಕಡಿಮೆಯಾದಾಗ ಬೇಡಿಕೆ ಹೆಚ್ಚಾಗಬಹುದು ಎನ್ನುವ ಉದ್ದೇಶದಿಂದ ರೈತರಿಂದ ಹೆಚ್ಚಿನ ಬೇಡಿಕೆ ಬಂದಾಗ ಖಂಡಿತವಾಗಿಯೂ ಸಹ ನಮ್ಮ ಗೌರವಾನ್ವಿತ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನೂ ಕೂಡ ನಾನು ಅನುಮೋದಿಸುತ್ತೇನೆ.

ವಿಷಯ: ಅರಸೀಕೆರೆ ತಾಲ್ಲೂಕಿನಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ.

(2915) ಶ್ರೀ ಬಸವರಾಜು ಎ.ಎಸ್.(ಅರಸೀಕೆರೆ): ಮಾನ್ಯ ಮಹಿಳಾ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ತಾಲ್ಲೂಕಿನಲ್ಲಿ ಇರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಖಾಲಿ ಇರುವ ಅಂಗನವಾಡಿ ಮೇಲ್ವಿಚಾರಕಿಕಯರ ಹಾಗೂ ಸಹಾಯಕಿಯರ ಹುದ್ದೆಗಳೆಷ್ಟು;